ಗೊತ್ತಿದ್ದ ಸಂಗತಿಯಾಗಿತ್ತು. ತನ್ನ ನೇಮ ನಿಷ್ಠೆ ಆಲೋಚನೆಗಳಿಗೆಲ್ಲಾ ತದ್ವಿರುದ್ಧವಿದ್ದ ಮಗನನ್ನು ಮೊದಮೊದಲು ಖುದ್ದು ತಾನೇ ತಿದ್ದಲು ನೋಡಿದ್ದ ಅಡವಪ್ಪ. ಶಂಭುಲಿಂಗ ಕ್ಯಾರೆ ಅನ್ನದಿದ್ದಾಗ ಮನೆತನದ ಪ್ರತಿಷ್ಠೆಯ ನೆಪದಲ್ಲಿ ಅವರಿವರ ಕೈಯ್ಯಿಂದ ಬುದ್ಧಿ ಹೇಳಿಸಿದ್ದ. ಆದರೆ, ಅದಾವುದಕ್ಕೂ ಮೈಟ್ ಮಾಡದೆ ಶಂಭುಲಿಂಗ ತನ್ನ ವಾರಿಗೆಯ ಪಡ್ಡೆ ಹೈಕಳ ಗುಂಪು ಕಟ್ಟಿಕೊಂಡು ತನ್ನದೇ ಲೋಕದಲ್ಲಿದ್ದ. ಈ ಬಗ್ಗೆ ಆಗಾಗ ಅಪ್ಪ ಮಗನಿಗೆ ಮನೆಯಲ್ಲಿ ದೊಡ್ಡ ರಾದ್ಧಾಂತವೇ ಆಗುತ್ತಿತ್ತು. ಏತಿ ಅಂದರೆ ಪ್ರೇತಿ ಅನ್ನತೊಡಗಿದ್ದ ಮಗನನ್ನು ಹೆಂಗಾದರೂ ಮಾಡಿ ಹಣಿಯಲು ನೋಡುತ್ತಿದ್ದ ಅಡವಪ್ಪ. ಹಿಂಗೇ ಬಿಟ್ಟರೆ ಅವನು ತಾನು ತಲೆ ಎತ್ತದಂಗೆ ಮಾಡೋದು ಗ್ಯಾರಂಟಿ ಅನ್ನುವುದವನಿಗೆ ನಿಕ್ಕಿಯಾಗಿತ್ತು. ಶಂಭುಲಿಂಗನಿಗೆ ಹುಡುಗಿಯೊಂದನ್ನು ಹುಡುಕಿ ಗಂಟಾಕಿದರೆ ತಾವಿಗೆ ಬತ್ತಾನೆ ಅಂತಂದುಕೊಂಡು ತನ್ನ ಕುಲಸ್ಥರ ಮನೆಯಲ್ಲಿ ಹೆಣ್ಣು ಹುಡುಕಲು ಶುರುಮಾಡಿದ್ದ. ಅದೇರೀತಿ ಅವರಿವರ ಬಳಿ ಹೆಣ್ಣು ಹುಡುಕಿಸುವ ಕೆಲಸವನ್ನೂ ಮಾಡುತ್ತಿದ್ದ. ಅದೊಂದು ದಿನ ಶಂಭುಲಿಂಗನಿಗೆ ಈ ವಿಷಯ ಕಿವಿಗೆ ಬಿದ್ದು, 'ನನಗೆ ಹೆಣ್ಣು ಹುಡ್ಕೋಕೆ ನೀನ್ಯಾರು? ಹಂಗೂ ದರ್ದಿದ್ದರೆ ನೀನೇ ಇನ್ನೊಂದ್ ಕಟ್ಕೋ,' ಅಂತ ಮುಖಕ್ಕೆ ಹೊಡೆದಂಗೆ ಜಾಡಿಸಿದ್ದ. ಅಡವಪ್ಪನಿಗೂ ರೇಗಿ ಹೋಗಿ, 'ನಾನು ಹುಡುಕ್ದೆಯಾ ಇನ್ನೇನು ದಾರೀಲೋಗೋ ದಾಸಯ್ಯ ಬತ್ತಾನ ಹುಡ್ಕಾಕೆ' ಅಂದಿದ್ದ. 'ಅವ್ನೇ ಎಷ್ಟೋ ವಾಸಿ ನಿನ್ಗಿಂತ ತಿಳ್ಕೋ,' ಅಂತ ಮಾತು ತಿರುಗಿಸಿದ್ದ ಶಂಭುಲಿಂಗ. ಅಲ್ಲಿಗೆ ತಾನು ಹುಡುಕುವ ಹೆಣ್ಣನ್ನು ಮಗ ಬಿಲ್ಕುಲ್ ಒಪ್ಪಲ್ಲ ಅನ್ನುವುದು ಅಡವಪ್ಪನಿಗೆ ಖಾತ್ರಿಯಾಗಿಹೋಗಿತ್ತು. ಅಲ್ಲಿಗೆ ಹೆಣ್ಣುಡುಕುವ ಕೆಲಸವನ್ನು ಕೈಬಿಟ್ಟಿದ್ದ. ಇದೆಲ್ಲಾ ನಡೆದು ವರುಷದ ಮೇಲಾಗಿ ಹೋಗಿತ್ತು. ಆವತ್ತಿನಿಂದ ಅಪ್ಪ ಮಗನ ನಡುವೆ ಬೇಕೋ ಬೇಡವೋ ಅನ್ನುವಂಗಿದ್ದ ಮಾತುಕತೆಗೂ ಕಲ್ಲು ಬಿದ್ದಿತ್ತು.

ಶಂಭುಲಿಂಗ ಅಡವಪ್ಪ ಸಣ್ಣೀರಮ್ಮನ ಒಬ್ಬನೇ ಮಗ. ಲಗ್ನವಾಗಿ ವರುಷ ಹತ್ತು ಕಳೆದರೂ ಕೂಸಾಗದೇ ಹೋಗಿದ್ದರಿಂದ ಮಂದೇವರು ಶಂಭುಲಿಂಗ ದೇವರಿಗೆ ಹರಕೆಯೊತ್ತಿದ್ದರು. ಆಗ ಹುಟ್ಟಿದ್ದ ಮಗುವಿಗೆ ಶಂಭುಲಿಂಗ ಅಂತ ದೇವರ ಹೆಸರನ್ನೇ ಇಟ್ಟಿದ್ದರು. ಶಂಭುಲಿಂಗ ಹೈಸ್ಕೂಲಿನಲ್ಲಿದ್ದಾಗ ಒಂದು ದಿನ ಅವನ ಅವ್ವ ಸಣ್ಣೀರವ್ವ ತೋಟದ ಕಲ್ಲುಬಾವಿಯಲ್ಲಿ ಹೆಣವಾಗಿ ತೇಲಿದ್ದಳು. ಆಗ ಅವ್ವನ ಸಾವಿನ ನೋವಿನ ಜೊತೆಗೆ ಊರವರ, 'ಕಚ್ಚರ್ಕ ಇವ್ನೇ ಏನೋ ಮಾಡಿ ಸಾಯಾಕವ್ನೆ,' ಅಂತಾಡುತ್ತಿದ್ದ ಮಾತುಗಳು ಶಂಭುಲಿಂಗನ ಮನದ ಮುಡುಕಿನಲ್ಲಿ ಮುಕ್ಕಾಗದೇ ಉಳಿದುಬಿಟ್ಟಿದ್ದವು. ಈ ಬಗ್ಗೆ ಆಗಾಗ ಅಪ್ಪ ಅವ್ವನ ನಡುವೆ ನಡೆಯುತ್ತಿದ್ದ ರಂಪಾಟ ಊರವರು ಆಡಿಕೊಳ್ಳುತ್ತಿದ್ದ ಮಾತುಗಳು ಸರೀಕರೆದುರು ಶಂಭುಲಿಗನಿಗೆ ಅವಮಾನವನ್ನುಕ್ಕಿಸುತ್ತಿದ್ದವು. 'ಎದೆ ಎತ್ರುಕ್ಕೆ ಬೆಳ್ದ ಮಗನ್ನಿಟ್ಕಂಡು ಅವ್ರು ಯಾವಳ್ತಾಕೋ ವೋಗಿ ಬಿದ್ದುರ್ತೀಯಲ್ಲ ನಾಚ್ಕೆಯಾಗಲ್ವ ನಿಂಗೆ,' ಆವತ್ತೊಂದು ದಿನ ಅವ್ವ ಸಣ್ಣೀರವ್ವ ಅಪ್ಪನ್ನು ಕೇಳುತ್ತಲೇ, 'ಹೂಕಣೇ ಬೋಸುಡಿ ನಾನು ಗಂಡ್ಸು ಅವುಳ್ತಾಕೂ ವೋಗ್ತೀನಿ ಇನ್ನೊಬ್ಳುತಾಕೂ ವೋಗ್ತೀನಿ,' ಅಂತ ಅವ್ವನ ಜುಟ್ಟಿಡಿದು ಬೆನ್ನ ಮೇಲೆ ಗುದ್ದಿದ್ದ ಏಟುಗಳ ವಜನ್ನಿಗೆ ಸಣ್ಣೀರವ್ವ ನೆಲಕ್ಕುರುಳಿ ಗ್ನಾನ ತಪ್ಪಿದ್ದಳು. ಆ ಚಣದಿಂದ ಶಂಭುಲಿಂಗನ ಪಾಲಿಗೆ ಅಪ್ಪ ಕೇಡಿಯಾಗಿಹೋಗಿದ್ದ. ಓದಿಗಾಗಿ ಊರು ಬಿಟ್ಟು ಡಿಗ್ರಿ ಮುಗಿಸಿಕೊಂಡು ತಿರುಗಿ ಬಂದಾಗ ಅಪ್ಪ ಅವನಿಗೆ ಮತ್ತಷ್ಟು ಜಡ್ಡುಗಟ್ಟಿದ ಆಸಾಮಿಯಂತೆ ಕಾಣತೊಡಗಿದ್ದ. ಅವನೆಲ್ಲಾ ಪೂಜೆ ಪುನಸ್ಕಾರ ನೇಮ ನಿಷ್ಠೆಗಳು ಅವನಿಗೆ ಧೋಕಾ ಅನಿಸತೊಡಗಿ ಅವುಗಳನ್ನು ಲೇವಡಿ ಮಾಡತೊಡಗಿದ್ದ. ಅಡವಪ್ಪ ಇದಕ್ಕೆ ತದ್ವಿರುದ್ಧವಾಗಿ ತನ್ನ ನೇಮ ನಿಷ್ಠೆಗಳನ್ನು ಜಾಸ್ತಿ ಮಾಡಿಕೊಂಡದ್ದಲ್ಲದೆ ಕದ್ದೂ ಮುಚ್ಚಿ ಇಟ್ಟುಕೊಂಡಿದ್ದ ಗಂಡನಿಲ್ಲದ ಗಾಳಿ ಗಂಗವ್ವನ ಮನೆಗೆ ಹೋಗಿಬರೋದನ್ನ ರಾಜಾರಸ್ತು ಮಾಡಿಕೊಂಡಿದ್ದ.

ಅಡವಪ್ಪ ಯಾವತ್ತೂ ಹಿಂಗೆ ಮೂಗನಂಗೆ ವತಾರೆಗೇ ಕೋಡುಗಲ್ಲನ್ನತ್ತಿ ಕೂತದ್ದನ್ನು